ಒ.ಎಸ್.422/2014

ದಿನಾಂಕಃ25-03-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು
**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ-**

ಸಾಕ್ಷ್ಯದ ಪ್ರಮಾಣಪತ್ರವನ್ನು ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನಿವೇಶನ ಸಂಖ್ಯೆಃ313 ಕ್ರಮ ಸಂಖ್ಯೆಃ3 ರ ಸ್ವತ್ತು ನಮ್ಮ ನಿವೇಶನದ ಪಕ್ಕಕ್ಕೆ ಬರುತ್ತದೆ ಎಂದರೆ ಸರಿ. ದಾವಾಸ್ವತ್ತಿನ ವಿಸ್ತೀರ್ಣ 20X40 ಅಡಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾಸ್ವತ್ತು ಸರ್ಕಾರದಿಂದ ನಿವೇಶನರಹಿತರಿಗೆ ಮಂಜೂರಾತಿ ಮಾಡಿರುವ ಸ್ವತ್ತು ಎಂದರೆ ಸರಿ. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯಿತಿಯಿಂದ ಹಕ್ಕುಪತ್ರ ಕೂಡ ವಿತರಿಸಿರುತ್ತಾರೆ ಎಂದರೆ ಸರಿ. ದಾವಾಸ್ವತ್ತು ಸಾಕಮ್ಮ ಕೋಂ ಟಿ.ನಾಗರಾಜುರವರಿಗೆ ಮಂಜೂರಾತಿಯಾಗಿದೆ ಎಂದರೆ ಸರಿ. ಸದರಿ ಮಂಜೂರಾತಿಯಾದ ಸ್ವತ್ತು 20X40 ಅಡಿ ಎಂದರೆ ನನಗೆ ಗೊತ್ತಿಲ್ಲ. ನಾವು ಖರೀದಿಸಿರುವ ಸ್ವತ್ತನ್ನು 2005-06 ನೇ ಸಾಲಿನಲ್ಲಿ ಖರೀದಿಸಿರುತ್ತೇವೆ. ದಾವಾಸ್ವತ್ತಿನ ಪಶ್ಚಿಮಕ್ಕೆ ನಮ್ಮ ಸ್ವತ್ತು ಬರುತ್ತದೆ ಎಂದರೆ ಸರಿ. ನಿಪಿ-9 ರಲ್ಲಿರುವ ಸ್ವತ್ತು ದಾವಾಸ್ವತ್ತು ಎಂದರೆ ಸರಿ. ದಾವಾಸ್ವತ್ತಿನ ಪೂರ್ವ ಭಾಗಕ್ಕೆ ನಿಪಿ-9 ರಲ್ಲಿರುವ ಗೇಟು ಬರುತ್ತದೆ. ದಾವಾಸ್ವತ್ತಿಗೆ ಲಗತ್ತಾಗಿ ನಿಪಿ-9 ರ ಛಾಯಾಚಿತ್ರದಲ್ಲಿನ ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಸ್ವತ್ತಿಗೆ ನಿರ್ಮಿಸಿರುವ ಮೆಟ್ಟಿಲುಗಳು ಎಂದು ಹೇಳುತ್ತಾರೆ. ವಾದಿಗೆ ಈಗ 13½X40 ಅಡಿ ಸ್ವತ್ತು ಮಾತ್ರ ಇದೆ ಎಂದರೆ ಸರಿ. ಉಳಿಕೆ 6½X40 ಅಡಿ ಸ್ವತ್ತು ಒತ್ತುವರಿಯಾಗಿ ಮೆಟ್ಟಿಲುಗಳನ್ನು ನಿರ್ಮಿತಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿ ಮೆಟ್ಟಿಲುಗಳು ನಮ್ಮ ಸ್ವತ್ತಿನಲ್ಲಿ ಇದೆ ಎಂದು ಹೇಳುತ್ತಾರೆ. ಆರ್.ಸಿ.ಸಿ. ಕಟ್ಟಡವನ್ನು 1986 ರಲ್ಲಿ ನಿರ್ಮಿತಿ ಮಾಡಲಾಗಿದೆ. ನಿಡಿ-6 ರಿಂದ 11 ರವರೆಗಿನ ದಾಖಲಾತಿಗಳಿಗೂ ಹಾಗೂ ವಾದಿಗೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆಃ41/77 ರಲ್ಲಿ ಈ ದಾವೆಯ ವಾದಿಯನ್ನು ಹಾಗೂ ದಾವಾಸ್ವತ್ತಿನ ಹಿಂದಿನ ಮಾಲೀಕರಾದ ಸಾಕಮ್ಮನವರನ್ನು ಪಕ್ಷಗಾರರನ್ನಾಗಿ ಮಾಡಿಲ್ಲ. ನಾವು ಪೂರ್ವ ಪಶ್ಚಿಮ 30 ಅಡಿಗಳು ಹಾಗೂ ಉತ್ತರ ದಕ್ಷಿಣ 40 ಅಡಿಗಳ ಸ್ವತ್ತನ್ನು ಹೊಂದಿದ್ದೇವೆ. ನಮಗೆ ಸೇರಿದ ನಿವೇಶನದ ಸಂಖ್ಯೆ ಗೊತ್ತಿಲ್ಲ. ಪೂರ್ವ ಭಾಗದಿಂದ ಹಿಡಿದು ಉತ್ತರ ಭಾಗದವರೆಗಿನ ಎಲ್ಲಾ ಸ್ವತ್ತುಗಳು ಮಂಜೂರಾತಿಯಾದ ಸ್ವತ್ತುಗಳು ಎಂದರೆ ಸರಿ. ಸದರಿ ಸ್ವತ್ತುಗಳ ಎಲ್ಲಾ ಮಾಲೀಕರಿಗೂ ಹಿಂದಿನ ಕಾಲದಲ್ಲಿಯೇ ಹಕ್ಕುಪತ್ರಗಳನ್ನು ವಿತರಣೆ ಮಾಡಿರುತ್ತಾರೆ ಎಂದರೆ ಸರಿ. ಎಲ್ಲರಿಗೂ ಕೂಡ 20X40 ಅಡಿಗಳ ಪ್ರಕಾರ ಹಂಚಿಕೆ ಮಾಡಿದ್ದಾರೆ ಎಂದರೆ ಸಾಕ್ಷಿ ನಮಗೆ 60X40 ಅಡಿಗಳ ಹಂಚಿಕೆ ಮಾಡಿದ್ದಾರೆ ಎಂದು ಹೇಳುತ್ತಾರೆ. 60X40 ಅಡಿಗಳ ಸ್ವತ್ತು ನನ್ನ ತಾತನಿಗೆ

ಮಂಜೂರಾತಿಯಾಗಿತ್ತು. 60X40 ಅಡಿಗಳ ಕುರಿತು ಹಕ್ಕುಪತ್ರವನ್ನು ನೀಡಿರುತ್ತಾರೆ. ವಾದಿ 13½X20 ಅಡಿ ಜಾಗದಲ್ಲಿ ಅಂಗಡಿಯನ್ನು ಇಟ್ಟುಕೊಂಡು ಜೀವನ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ ಎ ಒ

(ರಘುರಾಮ. ಎನ್.ಎಸ್.)
ಪ್ರ:1 ನೇ:ಹೆ: ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.